

ಇದು ನನ್ನ ಮನೆ... ಅಲಸ್ಕಾದ ಹಿಮದಲ್ಲಿ ಗತ್ತಿನಿಂದ ತಲೆಯೆತ್ತಿ ನೋಡುತ್ತಿರುವ ಹಿಮಕರಡಿ. (1985ರ ಚಿತ್ರ)

# ಪಾವಗಡದ ಸ್ನೇಹಿತರ ಹಾದಿಯಲ್ಲಿ ಆರ್ಕ್‌ಟಿಕ್‌ನ ಹಿಮಕರಡಿಗಳು

**ಪಾವಗಡದ ಕುರುಚಲು ಕಾಡು ಕ್ಷೀಣಿಸಿದಂತೆಲ್ಲ ಅಲ್ಲಿನ ಕರಡಿಗಳ ಸಂಖ್ಯೆ ಕ್ಷೀಣಿಸಿತು. ಅದೇ ದಾರಿಯಲ್ಲಿ ಹಿಮಕರಡಿಗಳ ಸಂತತಿ ಸಾಗುತ್ತಿದೆಯೇ? ಮನುಷ್ಯನ ಹಸ್ತಕ್ಷೇಪದಿಂದ ಪರಿಸರದಲ್ಲಿ ಉಂಟಾಗುತ್ತಿರುವ ವ್ಯತ್ಯಯಗಳು ಹಿಮಕರಡಿಗಳ ಸಂತಾನೋತ್ಪತ್ತಿ ಶಕ್ತಿ ಕ್ಷೀಣಗೊಳ್ಳಲು ಕಾರಣವಾಗಿವೆ.**

■ **ಘನಶ್ಯಾಮ ಡಿ.ಎಂ.**

ತುಮಕೂರು ಜಿಲ್ಲೆಯ ಪಾವಗಡ ಸೀಮೆ ಗೊತ್ತಲ್ವಾ? ನಾಯಕರ ಆಳ್ವಿಕೆಯಲ್ಲಿ ಪಾವಗಡದ ವ್ಯಾಪಾರದ ಶಿಸ್ತು ಮತ್ತು ಸಮೃದ್ಧಿ ಇತಿಹಾಸ ಪ್ರಸಿದ್ಧ. ಅಂದು ಪಾವಗಡ ಹಾಲು–ಹೈನು, ತೋಟಗಾರಿಕೆ ಬೆಳೆಗಳಿಗೆ ಹೆಸರುವಾಸಿಯಾಗಿತ್ತು. ಅಲ್ಲಿನ ಕಾಡು, ಚಿರತೆ, ಕರಡಿಗಳ ಬಗ್ಗೆಯೂ ಪುಂಖಾನುಪುಂಖ ಕಥೆಗಳಿವೆ. 'ನಮ್ಮೂರಲ್ಲಿ ಕರಡಿ ಓಡಾಡ್ತಿತ್ತು, ನಮ್ಮನೆ ಜಗಲಿಯಲ್ಲಿ ಕೂರ್ತಿತ್ತು, ತೋಟದ ಸಪೋಟ ತಿಂತಿತ್ತು' ಎಂದೆಲ್ಲಾ ತಾಲ್ಲೂಕಿನ ಹಿರಿಯಲು ನೆನಪಿಸಿಕೊಳ್ಳುತ್ತಾರೆ. ಆದರೆ ಹೊಸ ತಲೆಮಾರು ಮಾತ್ರ ಕರಡಿಗಳೊಂದಿಗೆ ಸಂಘರ್ಷಕ್ಕಿಳಿದಿದೆ. ಕರಡಿ ದಾಳಿಯಿಂದ ಸತ್ತ ಮನುಷ್ಯರು ಮತ್ತು ಮನುಷ್ಯರ ಹೊಡೆತಕ್ಕೆ ಜೀವಬಿಟ್ಟ ಕರಡಿಗಳ ಬಗ್ಗೆ ಬರೆದರೇ ಅದೇ ಒಂದು ದೊಡ್ಡ ಕಥೆಯಾದೀತು.

ಪಾವಗಡದ ಕಪ್ಪುಕರಡಿಗಳು ಈಗ ನೆನಪಾಗಲು ಕಾರಣವಿದೆ. ಆರ್ಕ್‌ಟಿಕ್ ಖಂಡದ ಅಚ್ಚಬಿಳುಪಿನ ಹಿಮಕರಡಿಗಳ ಬದುಕಿನ ಬಗ್ಗೆ ನಡೆದ ಸಂಶೋಧನೆಯೊಂದು, ಅವುಗಳ ಆವಾಸಸ್ಥಾನ (ನೆಲೆ) ಹಾಳಾಗುತ್ತಿರುವ ಬಗ್ಗೆ ಎಚ್ಚರಿಕೆಯ ಗಂಟೆ ಮೊಳಗಿಸಿದೆ. 'ಮನುಷ್ಯರು ಶೀಘ್ರ ಎಚ್ಚೆತ್ತುಕೊಂಡು ಮಾಲಿನ್ಯದ ಪ್ರಮಾಣ ಕಡಿಮೆ ಮಾಡದಿದ್ದರೆ ಇನ್ನು 80 ವರ್ಷಗಳಲ್ಲಿ ಹಿಮಕರಡಿಗಳ ಸಂತತಿ ನಾಮಾವಶೇಷವಾಗಲಿದೆ' ಎಂಬ ಆತಂಕವನ್ನು 'ನೇಚರ್ ಕ್ಲೈಮೇಟ್ ಚೇಂಜ್' ನಿಯತಕಾಲಿಕದಲ್ಲಿ ಪ್ರಕಟವಾದ ಸಂಶೋಧನಾ ವರದಿಯೊಂದು ವ್ಯಕ್ತಪಡಿಸಿದೆ.

ಉತ್ತರಧ್ರುವದಲ್ಲಿ ಈ ಪ್ರಾಣಿಯ ಅಸ್ತಿತ್ವಕ್ಕೇ ಕುತ್ತು ತಂದಿರುವ ವಿನಾಶಕಾರಿ ಬೆಳವಣಿಗೆಯ ಪಾಪದಲ್ಲಿ – ಫ್ರಿಜ್, ಏರ್ ಕಂಡೀಷನರ್ ಬಳಸುವ, ಕಲ್ಲಿದ್ದಲು ಸುಟ್ಟು ತಯಾರಾದ ವಿದ್ಯುಚ್ಛಕ್ತಿ ಉಪಯೋಗಿಸುವ ಮತ್ತು ಪೆಟ್ರೋಲ್ಡೀ–